# ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.
# ನ್ಯಾಯಾಲಯ, ಹೊಸನಗರ
## ಸಿ.ಸಿ. ನಂ. 1833/2023

**ಚಾಸಾ–7 ಪ್ರಾಸಾ–4**

| | | |
|---|---|---|
| ಹೆಸರು | – | ಸಂದೀಪ್ |
| ತಂದೆಯ ಹೆಸರು | – | ಚೂಡಾಮಣಿ |
| ವಯಸ್ಸು | – | 36 ವರ್ಷ |
| ವೃತ್ತಿ | – | ವ್ಯವಸಾಯ |
| ವಾಸಸ್ಥಳ | – | ಗೊರಗೋಡು ಗ್ರಾಮ. |

(ದಿನಾಂಕಃ **25.07.2026** ರಂದು ಸಾಕ್ಷಿಗೆ ಕ್ರಮಬದ್ಧವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು)

**ಮುಖ್ಯ ವಿಚಾರಣೆ ಃ ಸಹಾಯಕ ಸರ್ಕಾರಿ ಅಭಿಯೋಜಕ ರವರಿಂದ ಃ**

1. ನಾನು ಗೊರಗೋಡು ಗ್ರಾಮದಲ್ಲಿ ವಾಸವಾಗಿರುತ್ತೇನೆ. ನಮ್ಮ ಮನೆಯ ಎದುರುಗಡೆ ಚಾಸ1 ಮತ್ತು ಚಾಸ4, ಚಾಸ5 ರವರಿಗೆ ಸೇರಿದ ಮನೆ ಇರುತ್ತದೆ ಮತ್ತು ಅದರಲ್ಲಿ ಸದರಿಯವರು ವಾಸವಾಗಿರುವುದರಿಂದ ಸದರಿಯವರ ಪರಿಚಯ ಇರುತ್ತದೆ.

2. ಚಾಸ1 ರವರು ಶಿವಮೊಗ್ಗದಲ್ಲಿ ಖಾಸಗಿ ಕೆಲಸದಲ್ಲಿ ಇರುತ್ತಾರೆ. ನನಗೆ ಚಾಸ5 ರವರು ತನ್ನ ಮಗಳಾದ ಚಾಸ1 ರವರಿಗೆ ಆರೋಪಿಯು ಪ್ರೀತಿಸು ಮತ್ತು ಮದುವೆ ಮಾಡಿಕೋ ಎಂದು ಪೀಡಿಸುತ್ತಾ ಇದ್ದಾರೆ ಎಂದು ಹೇಳಿರುತ್ತಾರೆ.

3. ದಿನಾಂಕಃ 18.12.2022 ರಂದು ರಾತ್ರಿ 10 ಗಂಟೆ ಸಮಯದಲ್ಲಿ ನಮ್ಮ ಮನೆಯ ಎದುರುಗಡೆ ಇರುವ ರಸ್ತೆಯಲ್ಲಿ ಆರೋಪಿ 1 ಮತ್ತು ಚಾಸ5 ರವರ ಮಧ್ಯ ಜಗಳದ ಶಬ್ದ ಕೇಳುತ್ತಿತ್ತು, ನಾನು ನಮ್ಮ ಮನೆಯ ಗೇಟಿನಿಂದ ಸದರಿ ಗಲಾಟೆಯ ಬಗ್ಗೆ ವಿಚಾರಿಸಲು ಹೋಗಿರುತ್ತೇನೆ. ಆಗ ಅವರ ಮಧ್ಯ ಮಾತಿನ ಚಕಮಕಿ ನಡೆಯುತ್ತಿತ್ತು.

4. ಇಬ್ಬರೂ ಆರೋಪಿ 1 ಮತ್ತು ಚಾಸ 5 ರವರು ಕೊರಳುಪಟ್ಟಿ ಹಿಡಿದುಕೊಂಡು ಕತ್ತಲಲ್ಲಿ ನಿತ್ತಿರುತ್ತಾರೆ ನಾನು ಹೋಗಿ ಜಗಳ ಬಿಡಿಸಿರುತ್ತೇನೆ. ಚಾಸ 5 ರವರ ಮೊಣಕೈ ಗೆ ಪೆಟ್ಟಾಗಿರುತ್ತದೆ. ಸದರಿ ಪೆಟ್ಟು ಚಾಸ 5 ರವರು ನಾಯಿಯನ್ನು ಚೈನ್ ಹಿದುಕೊಂಡು ಹೊಗುವಾಗ ಆಗಿರುತ್ತದೆ.

5. ಆರೊಪಿ 1 ರವರು ನನ್ನ, ಚಾಸ 5 ಮತ್ತು ಇತರರ ವಿರುದ್ಧ ಶಿವಮೊಗ್ಗ ನ್ಯಾಯಾಲಯದಲ್ಲಿ ಅಲ್ಟ್ರಾಸಿಟಿ ಕೇಸ್ ಹಾಕಿರುತ್ತಾರೆ. ಅದು 2 ವರ್ಷಗಳ ನಂತರ ನಮ್ಮನ್ನು ನಿರ್ದೋಷಿ ಎಂದು ಬಿಡುಗಡೆ ಆಗಿರುತ್ತದೆ. ಸದರಿ ವಿಚಾರವಾಗಿ ಪೊಲಿಸರು ನಮ್ಮ ಹೇಳಿಕೆಯನ್ನು ಪಡೆದುಕೊಂಡಿರುತ್ತಾರೆ.

(ಈ ಹಂತದಲ್ಲಿ ಮಾನ್ಯ ಸ.ಸ.ಅ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿಯನ್ನು ಕೋರಿರುತ್ತಾರೆ. ಅನುಮತಿ ನೀಡಲಾಯಿತು).

**<u>ಪಾಟೀ ಸವಾಲುಃ ಸಹಾಯಕ ಸರ್ಕಾರಿ ಅಭಿಯೋಜಕ ರವರಿಂದ ಃ</u>**

1. ನಾವೆಲ್ಲರೂ ಆರೋಪಿ 1 ರವರಿಗೆ ಚಾಸ 1 ರವರಿಗೆ ಪೀಡಿಸಬಾರದು ಮತ್ತು ತೊಂದರೆ ಕೊಡಬಾರದು ಎಂದು ಹಲವಾರು ಬಾರೀ ಹೇಳಿರುತ್ತೇವೆ ಎಂದರೆ ಸರಿ. ನಾವು ಆರೋಪಿ 1 ರವರಿಗೆ ಅಷ್ಟೊಂದು ಬುದ್ದಿ ಹೇಳಿದ್ದರೂ ಸಹ ಚಾಸ 1 ರವರನ್ನು ಪೀಡಿಸುವುದು ಬಿಟ್ಟಿರುವುದಿಲ್ಲ.

2. ಸದರಿ ವಿಚಾರವಾಗಿ ಚಾಸ 1 ರವರು ಆರೋಪಿ 1 ರವರ ವಿರುದ್ಧ ದೂರನ್ನು ದಾಖಲಿಸಿರುತ್ತಾರೆ ಎಂದರೆ ಸರಿ. ಸದರಿ ದೂರಿನಲ್ಲಿ ಆರೋಪಿ 1 ರವರು ತಾನು ಚಾಸ 1 ರವರಿಗೆ ಯಾವುದೇ ಹಿಂಸೆ ಕೊಡುವುದಿಲ್ಲ ಎಂದು ಮುಚ್ಚಳಿಕೆ ಬರೆದುಕೊಟ್ಟಿರುತ್ತಾರೆ ಎಂದರೆ ಸರಿ.

3. ದಿನಾಂಕಃ 18.12.2022 ರಂದು ಬೆಳಗ್ಗೆ 11 ಗಂಟೆ ಸಮಯದಲ್ಲಿ ಚಾಸ 1 ರವರು ತನ್ನ ಅತ್ತೆ ಮನೆಯಿಂದ ತಮ್ಮ ಮನೆಗೆ ಬರುವ ದಾರಿಯಲ್ಲಿ ಆರೋಪಿ 1 ರವರು ಚಾಸ 1 ರವರನ್ನು ಅಡ್ಡಗಟ್ಟಿ ತನ್ನನ್ನು ಪ್ರೀತಿಸುವಂತೆ ಪೀಡಿಸಿ ಇಲ್ಲವಾದರೆ ಆ್ಯಸಿಡ್ ಹಾಕುತ್ತೇನೆ ಎಂದು

ಬೆದರಿಕೆ ಹಾಕಿ ಆರೋಪಿ 1 ರವರು ಚಾಸ 1 ರವರಿಗೆ ತಾನು ಜೈಲಿಗೆ ಹೋದರೂ ಪರವಾಗಿಲ್ಲ ತನಗೆ ಚಾಸ 1 ರವರು ಒಂದು ದಿನವಾದರೂ ಬೇಕು ಎಂದು ಲೈಂಗಿಕ ಕಿರುಕುಳ ಕೊಟ್ಟಿರುತ್ತಾರೆ ಎಂದೆರ ಸರಿ.

4. ಸದರಿ ವಿಚಾರವಾಗಿ ನಾವು ಆರೋಪಿ 1 ರವರ ತಾಯಿ ಮತ್ತು ಸಹೋದರಿಯಾದ ಆರೋಪಿ 2 ರಿಂದ 4 ರವರಿಗೆ ಸದರಿ ವಿಷಯವನ್ನು ತಿಳಿಸಿದ್ದರೂ ಸಹ ಸದರಿ ಅರೋಪಿ 2 ರಿಂದ ಚಾಸ 4 ರವರು ಚಾಸ 1 ರವರ ಮರ್ಯಾದೇ ತೆಗೆಯಬೇಕು ಎಂದು ಆರೋಪಿ 1 ರವರಿಗೆ ಕುಮ್ಮಕು ಕೊಟ್ಟಿರುತ್ತಾರೆ ಎಂದರೆ ಸರಿ.

5. ನಾನು ಈ ಪ್ರಕರಣದ ಬಗ್ಗೆ ಪೊಲಿಸರ ಮುಂದೆ ಹೇಳಿಕೆಯನ್ನು ಕೊಟ್ಟಿರುತ್ತೇನೆ.

**ಪಾಟೀ ಸವಾಲುಃ ಆರೋಪಿ ಪರ ವಕೀಲರಾದ ಶ್ರೀ ಎಸ್.ಟಿ ರವರು ಶ್ರೀ ವಿ.ಎಸ್.ಕೆ ರವರ ಪರವಾಗಿ ಪಾಟೀ ಸವಾಲಿಗೆ ಕಾಲಾವಕಾಶ ಕೇಳಿದ್ದರಿಂದ ಪಾಟೀ ಸವಾಲನ್ನು ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ. ಹೇ. ಕೇ. ಸ. ಎಂ. ಒ.

ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,
ಹೊಸನಗರ.